ಜನಾರೋಗ್ಯ ಇಂಜಿನಿಯರಿಂಗ್ ಉಪವಿಭಾಗವನ್ನು ತೆರೆಯುವ ಬಗ್ಗೆ

೧೭೧ (೫೫೮) ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಲೋಕೋಪಯೋಗಿ, ಉಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಚಿಕ್ಕಮಗಳೂರಿನಲ್ಲಿ ಜನಾರೋಗ್ಯ ಇಂಜಿನಿಯರಿಂಗ್ ಉಪವಿಭಾಗವನ್ನು ತೆರೆಯಲು ಮಾನ್ಯ ಮಂತ್ರಿಗಳು ಹಿಂದಿನ ಅಧಿವೇಶನದಲ್ಲಿ ಆಶ್ವಾಸನೆಯನ್ನು ನೀಡಿದ್ದರೂ ಇಲ್ಲಿಯವರೆಗೆ ಸರ್ಕಾರದವರು ಇದನ್ನು ಕಾರ್ಯಗತ ಮಾಡದೇ ಇರುವುದಕ್ಕೆ ಕಾರಣವೇನು?

ಆ) ಸದರಿ ಜನಾರೋಗ್ಯ ಇಂಜಿನಿಯರಿಂಗ್ ಇಲಾಖೆಗೆ ಇಂಜಿನಿಯರುಗಳನ್ನು ನೇರವಾಗಿ ನೇಮಕಾತಿ ಮಾಡದೆ ಬೇರೆ ಇಲಾಖೆಗಳಿಂದ ಎರವಲು ತರಲಾಗುವುದೇ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ಹಾಗೂ ನೇರ ನೇಮಕಾತಿಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಉಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

ಆ) ಇಂಜಿನಿಯರುಗಳನ್ನು ಲೋಕೋಪಯೋಗಿ ಇಲಾಖೆಯಿಂದ ಎರವಲು ಪಡೆಯಲಾಗುತ್ತಿದೆ.

ಇ) ಜನಾರೋಗ್ಯ ಶಿಲ್ಪ ಕಾರ್ಯವಲಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ದಿನಾಂಕ ೧-೪-೮೧ರಿಂದ ಸೇರಿದ್ದಾರೆ.
ಈ ಇಲಾಖೆಯ ಸಿಬ್ಬಂದಿ ವರ್ಗಕ್ಕೆ ಅನ್ವಯವಾಗುವಂತೆ ಪ್ರತ್ಯೇಕವಾದ ಪ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಸ್ತಾವವು ಪರಿಶೀಲನೆಯಲ್ಲಿದೆ.

ಹೊಸದುರ್ಗ ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲೆಗಳ ಕಟ್ಟಡಗಳ ಬಗ್ಗೆ

೧೭೨ (೪೮೨) ಶ್ರೀ ಬಿ. ರಾಮದಾಸ್ (ಹೊಸದುರ್ಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳು ಇರುವುದೆ ಹಾಗೂ ಎಷ್ಟು ಶಾಲೆಗಳಿಗೆ ಕೊಠಡಿಗಳು ಇರುವುದಿಲ್ಲ?

ಆ) ಕಟ್ಟಡಗಳಿಲ್ಲದ ಶಾಲೆಗಳಿಗೆ ಹೊಸ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಹೊಸದುರ್ಗ ತಾಲ್ಲೂಕಿನಲ್ಲಿ ಶಾಲೆಗಳ ಪೀಠೋಪಕರಣಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸರಬರಾಜು ಮಾಡಲು ಸರ್ಕಾರದವರು ಉದ್ದೇಶಿಸಿರುವರೇ?

ಈ) ಹೊಸದುರ್ಗ ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಗಳ ಹಳೇ ಕಟ್ಟಡಗಳು ದುಸ್ಥಿತಿಯಲ್ಲಿವೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಕಟ್ಟಡಗಳ ದುರಸ್ತಿಗೆ ಆಗತ್ಯವಾದ ಹಣ ನೀಡಲು ಸರ್ಕಾರದವರು ಉದ್ದೇಶಿಸಿರುವರೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೧) ೨೦೭ ಶಾಲೆಗಳಿಗೆ ಕಟ್ಟಡಗಳಿವೆ.
೨) ೨೮ ಶಾಲೆಗಳಿಗೆ ಕಟ್ಟಡಗಳಿರುವುದಿಲ್ಲ.

ಆ) ಹಂತಹಂತವಾಗಿ ಶಾಲಾ ಕಟ್ಟಡ ಕಟ್ಟಿಸಲು ಕ್ರಮ ಕೈಗೊಳ್ಳಲಾಗುವುದು.